ಪ್ಲೇಗು ನೋಟೀಸು.

ತಾರೀಖು 10ನೆ ಆಗಸ್ಟು 1904.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಹಾಸನ ತಾಲ್ಲೂಕು ಗೊರೂರು ಇನ್‌ಸ್ಪೆಕ್ಷನ್ ಲಾಡ್ಜ್ ಪ್ಲೇಗು ರೋಗದಿಂದ ಇನ್‌ಫೆಕ್ಟೆಡ್ ಆಗಿಯು ಮತ್ತು ದುಸರಾ ನೋಟೀಸು ಕೊಡುವ ವರಿಗೂ ಇಟ್ಟಿರುಕೊಳ್ಳುವದಕ್ಕೆ ಅರ್ಹವಾದ್ದಲ್ಲವಾಗಿಯು ಇದೆ.

ಸಿ. ಎ. ಮಹದೇವ ಶಾಸ್ತ್ರಿ,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್.

ಬ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟಿಕ್ಸ್‌ಟ್ ಗದ್ಯಭಾಗವು ಈಗ ಮಾರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿದೆ. ಖರೀದಿ ಪ್ರತಿ ಬಂದಕ್ಕೆ ಆಣೆ $2\frac{1}{2}$ (ಎರಡುವರಾಹಗಳು.)

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಸರ್ವರಿಗೂ ಪ್ರಸಿದ್ಧಪಡಿಸುವದೇನಂದರೆ :—

ಈಕೆಳಗೆ ರುಜು ಮಾಡಿರುವ ನನ್ನ ಮೈನರ ಮಗಳಾದ ಮತ್ತು ಬೇರೂರಲ್ಲಿದ್ದು ಮೃತಪಟ್ಟ ಖರೀದಿ ಶ್ರೀನಿವಾಸಶೆಟ್ರ ಹೆಂಡತಿ ಮೈನರು ಅನ್ನಪೂರ್ಣಮ್ಮನಿಗೆ ವೃತ್ತರ ವಾರಸೀ ಮತ್ತು ಹಕ್ಕು ಬಾಧ್ಯತೆಮೇಲೆ ಬಂದಿರುವ ವಿಶಿಷ್ಟ ಚರ ಸ್ಥಿರ ಆಸ್ತಿಗಳೆಲ್ಲವು ಕೆಲವು ಗ್ರಹಕೃತ್ಯದ ವಿವಾದ ಮತ್ತು ಅಸಿವಾರ್ಯದಿಂದ ಅಮಾನತ್ತು ಇವೆ. ಈ ಮಧ್ಯೆ ಈ ಮೈನರನ ಆಸ್ತಿಗಳನ್ನು ಈಕೆಯ ಇಂಟರೆಸ್ಟಿಗೂ ಹಕ್ಕು ಬಾಧ್ಯತೆಗೂ ವಿರೋಧವಾಗುವರೀತಿ ಮತ್ತು ಕ್ರಮದಲ್ಲಿ ಯಾರೇ ಆಗಲಿ ಯಾವವಿಧವಾಗಿಯೇ ಆಗಲಿ ವಿಲೇವಾರಿ ಹಾಗು ಪರಭಾರೆ ಮೊದಲಾದ್ದನ್ನ ಮಾಡಲು ಅಧಿಕಾರದ ಟಿ. ಕೊಮರ್ಲ ಗುರಪ್ಪಶೆಟ್ಟಿ ವಿನಹ ಇತರರಿಗೆ ಹಕ್ಕು ಇರುವದಿಲ್ಲ. ಆದ್ದರಿಂದ ಇಂತಾ ಮೈನರನ ಯಾವ ವಿಧವಾದ ಆಸ್ತಿಗಳನ್ನೇ ಆಗಲಿ ಯಾರೇ ಆಗಲಿ ಪರಭಾರೆ ಮಾಡಿಕ್ಕೊಂಡಾಗ್ಯೂ ಯಾ ನಗದು ಲೇವಾದೇವಿಯನ್ನು ಮಾಡಿ ಯಾ ಸಾಲವನ್ನು ಕೊಟ್ಟಾಗ್ಯೂ ಅದು ಪೂರ್ಜಿತವಾಗತಕ್ಕದ್ದಲ್ಲವೆಂದು ತಿಳಿಯಬೇಕಾಗಿ ಈ ಪ್ರಸಿದ್ಧಪತ್ರಿಕೆಯ ಮೂಲಕ ಫಾಯಿಷ್ ಮಾಡಿದೆ.

ಅನ್ನಪೂರ್ಣಮ್ಮನ ಮೈನರ್ ಗಾರ್ಡಿಯರ್ ಮತ್ತು ಈಕೆ ತಂದೆ ತ್ಯಾವುಗೊಂಡ್ಲು ಕೊಮರ್ಲು ಗುರಪ್ಪಶೆಟ್ಟಿ ರುಜು.